# ಉದ್ಯೋಗಕ್ಕಾಗಿ ಯುವಜನರು ಆಂದೋಲನ: ಏಕೆ ಮತ್ತು ಹೇಗೆ?

ಪ್ರತಿಯೊಬ್ಬರೂ ಒಂದಲ್ಲೊಂದು ಉತ್ಪಾದನಾ ಚಟುವಟಿಕೆಯಲ್ಲಿ ನಿರತರಾಗಿರುವುದು ಆರೋಗ್ಯಕರ, ಅಭಿವೃದ್ಧಿಯುತ ಸಮಾಜದ/ದೇಶದ ಉತ್ತಮ ಗುಣಲಕ್ಷಣವಾಗಿರುತ್ತದೆ. ಆ ಮೂಲಕ ತನ್ನ ಜೀವನವನ್ನು ಸ್ವಾವಲಂಬಿಯಾಗಿ ಕಟ್ಟಿಕೊಳ್ಳುವುದಲ್ಲದೇ ದೇಶದ ಅಭಿವೃದ್ದಿಯಲ್ಲಿ ಸಕರಾತ್ಮಕ ಪಾತ್ರ ವಹಿಸಲು ಸಾಧ್ಯವಾಗುತ್ತದೆ. ಇದನ್ನೇ ನಾವು ರಾಷ್ಟ್ರನಿರ್ಮಾಣದಲ್ಲಿ ತೊಡಗಿಕೊಳ್ಳುವುದು ಎಂದು ಕರೆಯಬಹುದು. ಆದರೆ ಇಂದು ನಮ್ಮ ದೇಶದ ಮತ್ತು ರಾಜ್ಯದ ಪರಿಸ್ಥಿತಿ ಇದಕ್ಕೆ ವ್ಯತಿರಿಕ್ತವಾಗಿದೆ. ದುಡಿಯುವ ಹಂಬಲ ಮತ್ತು ಸಾಮರ್ಥ್ಯವಿದ್ದರೂ ಸಹ ಕೋಟ್ಯಾಂತರ ಯುವಜನತೆ ಸಮರ್ಪಕ ಉದ್ಯೋಗ ಸಿಗದೇ ಒದ್ದಾಡುವ ಪರಿಸ್ಥಿತಿ ನಿರ್ಮಾಣವಾಗಿದೆ.

ಇಂದು ಭಾರತದ ಜನಸಂಖ್ಯೆಯಲ್ಲಿ ಶೇ.50% ಯುವಜನತೆಯಿದ್ದಾರೆ. ಇದರಲ್ಲಿ ಅರ್ಧದಷ್ಟು ಯುವಜನರಿಗೆ ಅವರ ಸಾಮರ್ಥ್ಯ ಮತ್ತು ನಿರೀಕ್ಷೆಗೆ ತಕ್ಕ ಉದ್ಯೋಗವಿಲ್ಲ. ಇಷ್ಟೊಂದು ದೊಡ್ಡ ಸಂಖ್ಯೆಯ ಯುವಜನರನ್ನು ಒಳಗೊಳ್ಳದೇ ದೇಶದ ಅಭಿವೃದ್ಧಿ ಹೇಗೆ ಸಾಧ್ಯ ಎಂಬ ಪ್ರಶ್ನೆಯನ್ನು ಆಳುವ ಸರ್ಕಾರಗಳು ಮರೆತಿವೆ. ದೊಡ್ಡ ದೊಡ್ಡ ಬಂಡವಾಳಿಗರಿಗೆ ಮತ್ತಷ್ಟು ಮಗದಷ್ಟು ಸಾಲ ನೀಡುವುದು, ತೆರಿಗೆ ವಿನಾಯಿತಿಗಳನ್ನು ನೀಡುವುದು ಮತ್ತು ಹೆಚ್ಚಿನ ಹೂಡಿಕೆಗೆ ಬೇಕಾದ ನೀತಿಗಳನ್ನು ಮಾಡುವುದರಿಂದ ದೇಶ ಅಭಿವೃದ್ಧಿಯಾಗುತ್ತದೆ ಎಂಬ ಭ್ರಮೆಯಲ್ಲಿರುವ ಸರ್ಕಾರಗಳು ಯುವಜನರ ಪರವಾದ ಒಂದೂ ನೀತಿಗಳನ್ನು ತರುತ್ತಿಲ್ಲ. ಇದರಿಂದಾಗಿ ಇಂದು ಭಾರತದಲ್ಲಿ ನಿರುದ್ಯೋಗವೆಂಬುದು ನಂಬರ್ ಒನ್ ಸಮಸ್ಯೆಯಾಗಿ ಬೆಳೆದುನಿಂತಿದೆ.

2013 ರಿಂದ ಆರಂಭಗೊಂಡ ಉತ್ಪಾದನಾ ಕ್ಷೇತ್ರದಲ್ಲಾದ ಕುಸಿತ ಇನ್ನು ಚೇತರಿಕೆ ಕಂಡಿಲ್ಲ. ಇತರೆ ಕ್ಷೇತ್ರಗಳಲ್ಲಿ ಹೆಚ್ಚಿನ ಉದ್ಯೋಗಗಳನ್ನು ಸೃಷ್ಟಿಸಿ, ಜನರ ಕೊಳ್ಳುವ ಶಕ್ತಿಯನ್ನು ಹೆಚ್ಚಿಸದಿದ್ದರೆ ಉತ್ಪಾದನಾ ಕ್ಷೇತ್ರ ಚೇತರಿಕೆ ಕಾಣುವುದಿಲ್ಲ ಎಂಬ ಸರಳ ಸತ್ಯ ಸರ್ಕಾರಗಳಿಗೆ ಗೊತ್ತಿಲ್ಲವೆಂದಲ್ಲ. ಆದರೆ ಜಾಬ್‌ಲೆಸ್ ಗ್ರೋಥ್ ಅನ್ನೇ ತಮ್ಮ ಪ್ರಧಾನ ಅಜೆಂಡ ಮಾಡಿಕೊಂಡಿರುವ ಈ ಸರ್ಕಾರಗಳಿಗೆ, ಸಾಲಮರುಪಾವತಿ ಮಾಡುವುದು ಸೇರಿ ಹೂಡಿಕೆಗೆ ತಕ್ಕ ಉದ್ಯೋಗ ಸೃಷ್ಟಿಸುವಂತೆ ಉದ್ಯಮಿಗಳನ್ನು ತಾಕೀತು ಮಾಡುವ ಇಚ್ಛಾಶಕ್ತಿ ಇಲ್ಲದಿರುವುದು ಇಂದಿನ ನಿರುದ್ಯೋಗ ಸಮಸ್ಯೆಯ ಮೂಲ ಕಾರಣವಾಗಿದೆ. ಜೊತೆ ಜೊತೆಗೆ ಬೇಕಂತಲೇ ಕೃಷಿಯನ್ನು ಹಳ್ಳ ಹಿಡಿಸಿರುವುದು, ಸಣ್ಣ, ಅತಿಸಣ್ಣ ಮತ್ತು ಮಧ್ಯಮ ಪ್ರಮಾಣದ ಕೈಗಾರಿಕೆಗಳ ನಿರ್ಲಕ್ಷ್ಯ, ಮುಂದಾಲೋಚನೆಯಿಲ್ಲದ ನೋಟು ಅಮಾನ್ಯೀಕರಣ ಮತ್ತು ಜಿಎಸ್‌ಟಿ ತೆರಿಗೆ ನೀತಿ ಇವೆಲ್ಲವೂ ನಿರುದ್ಯೋಗದ ಪ್ರಮಾಣ ಹೆಚ್ಚಳಗೊಳ್ಳಲು ಪ್ರಮುಖ ಕಾರಣಗಳಾಗಿವೆ.

ಹಾಗಾಗಿ ನಿರುದ್ಯೋಗ ಎಂಬುದು ವ್ಯಕ್ತಿಗತ ಸಮಸ್ಯೆಯಲ್ಲ ಬದಲಿಗೆ ಸಾಮಾಜಿಕ, ರಾಜಕೀಯಾರ್ಥಿಕ ಸಮಸ್ಯೆಯಾಗಿದೆ. ಇದಕ್ಕೆ ಸರ್ಕಾರದ ನೀತಿಗಳು ಕಾರಣವೇ ಹೊರತು ಯಾರದೋ ಹಣೆಬರಹ, ಕೌಟುಂಬಿಕ ಹಿನ್ನೆಲೆ ಸರಿ ಇಲ್ಲದಿರುವುದು, ಕೌಶಲ್ಯ ಇಲ್ಲದಿರುವುದು ಕಾರಣವಲ್ಲ ಎಂಬುದನ್ನು ಮೊದಲು ಯುವಜನರು ಅರ್ಥ ಮಾಡಿಕೊಳ್ಳಬೇಕು. ಹಾಗಂತ ಎಲ್ಲರಿಗೂ ಸರ್ಕಾರವೇ ನೇರವಾಗಿ ಉದ್ಯೋಗ ಕೊಡಬೇಕು ಎಂದು ಹೇಳುವುದಲ್ಲ. ಬದಲಿಗೆ ಸರ್ಕಾರ ಉದ್ಯೋಗ ಸೃಷ್ಟಿಯಾಗುವಂತಹ ನೀತಿಗಳನ್ನು ತರಬೇಕು, ಸುಲಭವಾಗಿ ಉದ್ಯೋಗ ಸಿಗುವಂತಹ ವಾತವಾರಣ ನಿರ್ಮಿಸಬೇಕು ಎಂದು ಒತ್ತಾಯಿಸಬೇಕಾಗಿದೆ. ಹಾಗಾಗಿ ಉದ್ಯೋಗಕ್ಕಾಗಿಯ ಯುವಜನರ ಚಳವಳಿ ತುರ್ತಿನದ್ದಾಗಿದೆ ಅಷ್ಟೆ ಅಲ್ಲ ಅದೊಂದು ರಾಷ್ಟ್ರೀಯ ಅಗತ್ಯವಾಗಿದೆ.

ಇಂದು ಭಾರತವನ್ನು ಕಾಡುತ್ತಿರುವ ಪ್ರಧಾನ ಸಮಸ್ಯೆಗಳಲ್ಲಿ ನಿರುದ್ಯೋಗ ಮತ್ತು ಕೃಷಿ ಬಿಕ್ಕಟ್ಟು ಮುಖ್ಯವಾದವುಗಳಾಗಿವೆ. ಇವುಗಳಿಂದಾಗಿ ಬಡತನ, ರೈತರ ಆತ್ಮಹತ್ಯೆ, ಭ್ರಷ್ಟಾಚಾರ, ಅಪರಾಧಗಳ ಹೆಚ್ಚುವಿಕೆ, ಸಾಮಾಜಿಕ ಅಶಾಂತಿ ಹೆಚ್ಚಾಗುತ್ತಿದೆ. ಭಾರತವು ದಿನೇ ದಿನೇ ಯುವಭಾರತವಾಗುತ್ತಿದೆ. ಸದ್ಯ ಭಾರತದಲ್ಲಿರುವ ಒಟ್ಟು ಜನಸಂಖ್ಯೆಯಲ್ಲಿ ಶೇ.65 ಜನರು 35 ವರ್ಷದೊಳಗಿನ ಯುವಜನರೇ ಆಗಿದ್ದಾರೆ. ಈ ಹಿನ್ನೆಲೆಯಲ್ಲಿಯೇ 2013ರ ಕರ್ನಾಟಕ ರಾಜ್ಯ ವಿಧಾನಸಭೆಗೂ ಮುಂಚೆ ಎಲ್ಲಾ ರಾಜಕೀಯ ಪಕ್ಷಗಳು ತಮ್ಮ ಪ್ರಣಾಳಿಕೆಯಲ್ಲಿ ಉದ್ಯೋಗ ಸೃಷ್ಟಿಯ ಬಗ್ಗೆ ಸ್ಪಷ್ಟವಾಗಿ ಬರೆದುಕೊಂಡಿದ್ದರು. ಅಧಿಕಾರಕ್ಕೆ ಬಂದರೆ 50 ಲಕ್ಷ ಉದ್ಯೋಗಗಳನ್ನು ಸೃಷ್ಟಿಸುವುದಾಗಿ ಕಾಂಗ್ರೆಸ್, 30 ಲಕ್ಷ ಉದ್ಯೋಗಗಳನ್ನು ಸೃಷ್ಟಿಸುವುದಾಗಿ ಜೆಡಿಎಸ್ ಮತ್ತು 5 ಲಕ್ಷ ಕುಟುಂಬಗಳಿಗೆ ಉದ್ಯೋಗ ನೀಡುವುದಾಗಿ ಬಿಜೆಪಿ ಹೇಳಿತ್ತು. 2014ರ ಲೋಕಸಭಾ ಚುನಾವಣೆಯ ಸಂದರ್ಭದಲ್ಲಿ ನರೇಂದ್ರ ಮೋದಿಯವರು ವರ್ಷಕ್ಕೆ ಒಂದು ಕೋಟಿ ಉದ್ಯೋಗಗಳನ್ನು ಸೃಷ್ಟಿಸುತ್ತೇನೆ, ನಿಮ್ಮ ಅರ್ಹತೆಗೆ ತಕ್ಕ ಉದ್ಯೋಗ ಗ್ಯಾರಂಟಿ ಮಾಡುತ್ತೇವೆ ಎಂದು ಘೋಷಿಸಿದ್ದರು.

ಆದರೆ ಈ ಭರವಸೆಗಳನ್ನು ಈಡೇರಿಸುವಲ್ಲಿ ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರ ಸಂಪೂರ್ಣವಾಗಿ ವಿಫಲವಾಗಿವೆ. 2015ರಲ್ಲಿ 2.50 ಲಕ್ಷ ಉದ್ಯೋಗಗಳನ್ನು ಮಾತ್ರ ಸೃಷ್ಟಿಸಲು ಸಾಧ್ಯವಾದ ಕೇಂದ್ರ ಸರ್ಕಾರಕ್ಕೆ 2016ರಲ್ಲಿ ನೋಟು ರದ್ದತಿಯಿಂದಾಗಿ 58 ಲಕ್ಷ ಉದ್ಯೋಗಗಳನ್ನು ಕಿತ್ತುಹಾಕಿತು. 2017ರಲ್ಲಿಯೂ ಸಹ ಜಿಎಸ್‌ಟಿ ಇನ್ನಿತರ ನೀತಿಗಳಿಂದಾಗಿ ಉದ್ಯೋಗ ಸೃಷ್ಟಿ ಸಾಧ್ಯವಾಗಲಿಲ್ಲ.

2018ರಲ್ಲಿ ನರೇಂದ್ರ ಮೋದಿಯವರು ತಮ್ಮ ವೈಫಲ್ಯವನ್ನು ಮುಚ್ಚಿಕೊಳ್ಳಲು ಪಕೋಡ ಮಾರುವುದು ಉದ್ಯೋಗವಲ್ಲವೇ ಎಂದು ಹೇಳುವ ಮಟ್ಟಕ್ಕೆ ತಮ್ಮ ಅಸಹಾಯಕರಾಗಿಬಿಟ್ಟರು. ಸ್ಕಿಲ್ ಇಂಡಿಯಾ ಮತ್ತು ಮೇಕ್ ಇನ್ ಇಂಡಿಯಾ ಮಕಾಡೆ ಮಲಗಿದವು. ಕೇಂದ್ರ ಸರ್ಕಾರವೇ ನೇಮಿಸಿದ್ದ ಶಾರದ ಪ್ರಸಾದ್ ಸಮಿತಿಯು ಇದೊಂದು ಉದ್ಯೋಗ ಸೃಷ್ಟಿಯ ಅಣಕ ಅಷ್ಟೇ ಎಂದು ವರದಿ ನೀಡಿತು.

ರಾಜ್ಯ ಸರ್ಕಾರದ ವಿಷಯಕ್ಕೆ ಬರುವುದಾದರೆ 2017ರ ಕೊನೆಯ ವೇಳೆಗೆ ಅಧಿಕಾರಕ್ಕೆ ಬಂದು ನಾಲ್ಕುವರೆ ವರ್ಷದ ನಂತರ ನಾವು 13.91 ಲಕ್ಷ ಉದ್ಯೋಗ ಸೃಷ್ಟಿಸಿದ್ದೇವೆ ಎಂದು ಜಾಹಿರಾತು ಕೊಟ್ಟು ಉದ್ಯೋಗ ಸೃಷ್ಟಿಯಲ್ಲಿ ಕರ್ನಾಟಕವೇ ನಂಬರ್ ಒನ್ ಎಂದು ಘೋಷಿಸಿಕೊಂಡರು. ಆಗ ಅವರು ಕೊಟ್ಟಿದ್ದ 50 ಲಕ್ಷದ ಭರವಸೆಯನ್ನು ಮರೆತಿದ್ದರು ಅಷ್ಟೆ ಅಲ್ಲ ಅವರು ಸೃಷ್ಟಿಸಿದ್ದ ಉದ್ಯೋಗಗಳು ಬಹುಪಾಲು ಅಭದ್ರ ಉದ್ಯೋಗಗಳಾಗಿದ್ದವು. ಅಂದರೆ ಸರ್ಕಾರಿ ವಲಯದ ನೂರಾರು ಇಲಾಖೆಗಳಲ್ಲಿ ಖಾಯಂ ನೌಕರರನ್ನು ನೇಮಿಸಿಕೊಳ್ಳುವ ಬದಲು ಗುತ್ತಿಗೆ, ತಾತ್ಕಾಲಿಕ ಆಧಾರದಲ್ಲಿ ನೇಮಿಸಿಕೊಂಡು ಅವರಿಗೆ ನಿಯಮಿತ ವೇತನ, ಸಮಾನ ವೇತನ ನೀಡದೇ ಆಧುನಿಕ ಜೀತಪದ್ಧತಿಯನ್ನು ಪೋಷಿಸಿಕೊಂಡು ಬರುತ್ತಿದೆ. ಹೆಚ್ಚು ಸುಭದ್ರ ಉದ್ಯೋಗ ಸೃಷ್ಟಿಸಬಹುದಾಗಿದ್ದ ಸರ್ಕಾರವೇ ಗುತ್ತಿಗೆ ಶಿಕ್ಷಕರನ್ನು, ಆರೋಗ್ಯ ಸಹಾಯಕಿಯರ ರೀತಿಯ ಹಲವು ಅಭದ್ರ ಉದ್ಯೋಗಿಗಳನ್ನು ನೇಮಿಸಿಕೊಂಡು ಸಂವಿಧಾನ ವಿರೋಧಿಯಾಗಿ ನಡೆದುಕೊಳ್ಳುತ್ತಿದೆ.

ಈ ಆಂದೋಲನವು ಉದ್ಯೋಗ ಸೃಷ್ಟಿಗಾಗಿ ಒತ್ತಾಯಿಸುವ ಸರ್ಕಾರದ ನೀತಿಗಳಲ್ಲಿ ಬದಲಾವಣೆ ತರುವಂತಹ ಬಹುದೊಡ್ಡ ಸಾಧ್ಯತೆಯಾಗಿದೆ. ಏಕೆಂದರೆ ಪಕ್ಷಬೇಧವಿಲ್ಲದೇ ಎಲ್ಲಾ ಸರ್ಕಾರಗಳು ನಿರುದ್ಯೋಗವನ್ನು ಸೃಷ್ಟಿಸುತ್ತಿವೆ. ಕಾಂಗ್ರೆಸ್ ಅನ್ನು ಬೆಂಬಲಿಸುವ ಯುವಜನರು ಸಂಕಷ್ಟದಲ್ಲಿದ್ದಾರೆ ಅದೇ ರೀತಿ ಬಿಜೆಪಿ ಅಥವಾ ಇನ್ಯಾವುದೋ ರಾಜಕೀಯ ಪಕ್ಷಗಳನ್ನು ಬೆಂಬಲಿಸುವ ಯುವಜನರು ಕೂಡ ನಿರುದ್ಯೋಗದ ಸಮಸ್ಯೆಯಿಂದ ಬಳಲುತ್ತಿದ್ದಾರೆ. ಹಾಗಾಗಿ ಈ ಆಂದೋಲನವು ಜಾತಿ, ಧರ್ಮ, ಲಿಂಗ, ಪಕ್ಷ ಬೇಧವಿಲ್ಲದೇ ಎಲ್ಲರನ್ನು ಒಳಗೊಳ್ಳುವ ಸೆಕ್ಯುಲರ್ ವಿಷಯವಾಗಿದೆ ಮತ್ತು ಮುಖ್ಯವಾಗಿ ಯುವಜನರನ್ನು ಒಳಗೊಳ್ಳುತ್ತದೆ. ಹಾಗೂ ಈ ಯುವಜನರು ಮತದಾರರಾಗಿರುತ್ತಾರೆ ಎಂಬುದು ಮಹತ್ವದ ವಿಷಯವಾಗಿದೆ. ಏಕೆಂದರೆ ಕರ್ನಾಟಕದಲ್ಲಿ ಒಟ್ಟು ಮತದಾರರಲ್ಲಿ ಶೇ.52% ಮತದಾರರು 18 ವರ್ಷದಿಂದ 39 ವರ್ಷದೊಳಗಿನ ಯುವಜನರೇ ಆಗಿದ್ದು ಈ ಪಕ್ಷಗಳ ಗೆಲುವು ಸೋಲಿನಲ್ಲಿ ಯುವಜನರ ಮತಗಳೇ ನಿರ್ಣಾಯಕ ಪಾತ್ರವಹಿಸುತ್ತಾರೆ ಎಂಬುದು ಎಲ್ಲಾ ಪಕ್ಷಗಳಿಗೂ ತಿಳಿದಿದೆ. ಹಾಗಾಗಿ ಚುನಾವಣಾ ಸಂದರ್ಭದಲ್ಲಿ ಈ ಆಂದೋಲನಕ್ಕೆ ಮಹತ್ವದ ಪಾತ್ರ ಒದಗಿಬಂದಿದೆ.

ಇದೇ ಸಂದರ್ಭದಲ್ಲಿ ಉದ್ಯೋಗ ಸೃಷ್ಟಿಯಾಗದಿದ್ದರೆ ಬಡತನದ ಪ್ರಮಾಣ ಹೆಚ್ಚಳಗೊಳ್ಳುತ್ತದೆ ಎಂಬುದು ನಮಗೆಲ್ಲಾ ಗೊತ್ತಿದೆ. ಅಷ್ಟೆ ಅಲ್ಲ ಈ ಯುವಜನರಿಗೆ ಉದ್ಯೋಗ ನೀಡದಿದ್ದರೆ ಕೆಲಸವಿಲ್ಲದ ಯುವಜನತೆ ಖಿನ್ನತೆಗೆ ಒಳಗಾಗುವುದು, ಮಾದಕವಸ್ತುಗಳ ವ್ಯಸನಕ್ಕೆ ಬಲಿಯಾಗುವುದು, ರಾಜಕೀಯ ಪಕ್ಷಗಳ ಪುಡಾರಿಗಳಾಗುವುದು, ರೌಡಿಗಳಾಗುವುದು, ಭ್ರಷ್ಟಾಚಾರ ಮಾಡುವುದು ಇನ್ನಿತರ ಕೆಟ್ಟ ಕೆಲಸಗಳಲ್ಲಿ ತೊಡಗಿಕೊಳ್ಳುವುದರಿಂದ ಸಮಾಜದಲ್ಲಿ ಅಪರಾಧಗಳ ಪ್ರಮಾಣ ಕೂಡ ಗಣನೀಯ ಪ್ರಮಾಣದಲ್ಲಿ ಹೆಚ್ಚಳವಾಗುತ್ತದೆ. ಇಂತಹ ಯುವಜನರನ್ನು ಬಳಸಿಕೊಂಡು ಕೆಲವು ಮೂಲಭೂತವಾದಿಗಳು, ಮತಾಂಧರು ಜಾತಿ-ಧರ್ಮಗಳ ನಡುವೆ ಗಲಭೆ ಸೃಷ್ಟಿಸಿ ತಮ್ಮ ರಾಜಕೀಯ ಲಾಭ ಪಡೆದುಕೊಳ್ಳುತ್ತಾರೆ. ಕೋಮುಗಲಭೆ, ಭಯೋತ್ಪಾದನೆಯಂತಹ ಸಮಾಜವಿರೋಧಿ ದುಷ್ಕೃತ್ಯಗಳಿಗೆ ಈ ಯುವಜನತೆ ದಾಳವಾಗಿ ಬಳಸಲ್ಪಡುವ ಅಪಾಯವಿದೆ. ಹಾಗಾಗಿ ಈ ಯುವಜನರನ್ನು ಇಂತಹ ಅಪಾಯದಿಂದ ಪಾರು ಮಾಡಿ ರಚನಾತ್ಮಕ ಕೆಲಸ ಮತ್ತು ಆಂದೋಲನದಲ್ಲಿ ತೊಡಗಿಸುವುದು ಜರೂರಾಗಿದೆ.

ಈ ಹಿನ್ನೆಲೆಯಲ್ಲಿ ಆರಂಭಗೊಂಡ ಉದ್ಯೋಗಕ್ಕಾಗಿ ಯುವಜನರು ಆಂದೋಲನವು ಉದ್ಯೋಗ ಸೃಷ್ಟಿಯ ಅಗತ್ಯ, ಉದ್ಯೋಗ ಸೃಷ್ಟಿಯ ಸಾಧ್ಯತೆಯ ಕುರಿತು ವಿಸ್ತೃತವಾಗಿ ಅಧ್ಯಯನ ನಡೆಸಿ ಸ್ಪಷ್ಟ ಗುರಿ ಉದ್ದೇಶಗಳನ್ನಿಟ್ಟುಕೊಂಡು ಬೃಹತ್ ಜನಾಂದೋಲನಕ್ಕೆ ಸಜ್ಜಾಗಿದೆ. 30 ಸಾವಿರ ಬಹಿರಂಗ ಸಹಿ ಸಂಗ್ರಹ ಆಂದೋಲನ, ಉದ್ಯೋಗಗಳ ಮತ್ತು ಉದ್ಯೋಗಾಂದೋಲನದ ಬಗ್ಗೆ ಸಮಗ್ರ ಮಾಹಿತಿ ನೀಡಿವು ಮೈ ಜಾಬ್ ಮೊಬೈಲ್ ಆಪ್ ಬಿಡುಗಡೆ ಮಾಡಿದ್ದೇವೆ. ಇದನ್ನು 23ಸಾವಿರ ಜನ ಇದನ್ನು ಡೌನ್‌ಲೋಡ್ ಮಾಡಿಕೊಂಡಿದ್ದಾರೆ. ಈಗಾಗಲೇ 21 ಜಿಲ್ಲೆಗಳಲ್ಲಿ ಪೂರ್ವಭಾವಿ ಸಭೆಗಳು, ಕಾರ್ಯಗಾರ ಮತ್ತು ರಾಜಕೀಯ ಪಕ್ಷಗಳಿಗೆ ಉದ್ಯೋಗ ಸೃಷ್ಟಿಸಲು ತಾಕೀತು ಮಾಡುವ ಕಾರ್ಯಕ್ರಮಗಳನ್ನು ಯಶಸ್ವಿಯಾಗಿ ನಡೆಸಿದ್ದೇವೆ. ಉದ್ಯೋಗಕ್ಕಾಗಿ ಯುವಜನರ ಕಾರ್ಯಕರ್ತರ ತಂಡ ರಾಜ್ಯದ 100 ವಿಧಾನಸಭಾ ಕ್ಷೇತ್ರಗಳನ್ನು ಗುರುತಿಸಿ, ಪ್ರತಿ ಮನೆ ಮನೆಗೂ ಹೋಗಿ, ಉದ್ಯೋಗ ಕೊಡದ ರಾಜಕೀಯ ಪಕ್ಷಗಳಿಗೆ ನಮ್ಮ ಓಟ್ ಇಲ್ಲ, ನಮ್ಮ ಓಟು ಉದ್ಯೋಗಕ್ಕೆ ಎಂಬುದಾಗಿ ಪ್ರಚಾರ ನಡೆಸುತ್ತಿದೆ. ಪ್ರತಿ ವಿಧಾನಸಭಾ ಕ್ಷೇತ್ರದಲ್ಲಿ ಕನಿಷ್ಠ 10 ಸಾವಿರ ಯುವಜನರ ಓಟ್ ಬ್ಯಾಂಕ್ ಸೃಷ್ಟಿಸಲು ಪ್ರಯತ್ನಿಸುತ್ತಿದೆ. ಆ ಮೂಲಕ ರಾಜಕೀಯ ಪಕ್ಷಗಳಿಗೆ ನೋ ಜಾಬ್ ನೋ ಓಟ್ ಎಂದು ಎಚ್ಚರಿಕೆ ನೀಡುತ್ತಿದೆ.

ಇದರ ಜೊತೆ ಜೊತೆಗೆ ಉದ್ಯೋಗ ಸೃಷ್ಟಿಯ ಸಾಧ್ಯತೆಗಳ ಬಗ್ಗೆ ಕಾರ್ಯಗಾರಗಳು, ಅಧ್ಯಯನ ಶಿಬಿರಗಳನ್ನು ನಡೆಸುತ್ತಿದೆ. ತುಮಕೂರು ಜಿಲ್ಲೆಯನ್ನು ಪೈಲೆಟ್ ಯೋಜನೆಯನ್ನಾಗಿ ತೆಗೆದುಕೊಂಡು ಕೃಷಿ ಆಧಾರಿತ ಉದ್ಯೋಗ ಉದ್ಯೋಗ ಸೃಷ್ಟಿಯ ಪ್ರಯೋಗ ಸಹ ನಡೆಸುತ್ತಿದೆ. ಎಲ್ಲಕ್ಕಿಂತ ಮುಖ್ಯವಾಗಿ ಈ ಎಲ್ಲಾ ಸಮಸ್ಯೆಗಳ ಪರಿಹಾರಕ್ಕೆ ರಚನಾತ್ಮಕ ಚಳವಳಿಯೊಂದು ಅಗತ್ಯವಿದ್ದೇ ಇದೆ. ಹಾಗಾಗಿ ನುರಿತ ತಜ್ಞರ ತಂಡದಿಂದ ಸಮಗ್ರ ಅಧ್ಯಯನ ನಡೆಸಿ ಮುಂದಿನ 5 ವರ್ಷಗಳಲ್ಲಿ ಕರ್ನಾಟಕದಲ್ಲಿ ಕೃಷಿ, ಉತ್ಪಾದನಾ ಕ್ಷೇತ್ರ, ಸೇವಾ ವಲಯ, ಸ್ವ ಉದ್ಯೋಗ, ಶಿಕ್ಷಣ ಮತ್ತು ಕೌಶಲ್ಯಾಭಿವೃದ್ಧಿ ಇತ್ಯಾದಿ ಕ್ಷೇತ್ರಗಳಿಂದ ಇರುವ ಒಂದು ಕೋಟಿ ಅಭದ್ರ ಉದ್ಯೋಗಗಳನ್ನು ಸುಸ್ಥಿರಗೊಳಿಸುವುದು ಮತ್ತು ಹೊಸದಾಗಿ 50 ಲಕ್ಷ ಉದ್ಯೋಗ ಸೃಷ್ಟಿಯ ಸಾಧ್ಯತೆಗಳ ನೀಲನಕ್ಷೆಯನ್ನೊಳಗೊಂಡ ಯುವ ಪ್ರಣಾಳಿಕೆಯೊಂದನ್ನು ಬಿಡುಗಡೆ ಮಾಡಿದೆ. ಕೃಷಿಗೆ ಕೈಗಾರಿಕೆಯ ಸ್ಥಾನಮಾನದೊಂದಿಗೆ ಸ್ವಾಮಿನಾಥನ್ ಆಯೋಗದ ಸಿ2+50% ಶಿಫಾರಸ್ಸನ್ನು ಜಾರಿಗೊಳಿಸುವುದು. ಸ್ಥಳೀಯ ಕೃಷಿ ಸಂಪನ್ಮೂಲಗಳನ್ನು ಸ್ಥಳೀಯವಾಗಿಯೇ ಸಂಸ್ಕರಣೆ, ಮೌಲ್ಯವರ್ಧನೆ, ಶೇಖರಣೆ ಮತ್ತು ಮಾರುಕಟ್ಟೆಯ ಜೋಡಣೆ ಮಾಡುವುದು. ನಿಸರ್ಗ ಪೂರಕ ತಾಳಿಕೆಯ ಕೃಷಿ, ರೈತರಿಗೆ ನೆರವು ಮತ್ತು ಮಾರ್ಗದರ್ಶನಕ್ಕಾಗಿ ಪ್ರತಿ 500 ಜನ ರೈತರಿಗೊಬ್ಬರಂತೆ 15000 ರೈತಬಂಧುಗಳ ನೇಮಕ, ಎಲ್ಲಾ ಗ್ರಾಮಗಳ ಕಂದಾಯ ದಾಖಲೆಗಳನ್ನು ಸರಿಪಡಿಸಿ, ಸರ್ಕಾರದ ಸೌಲಭ್ಯಗಳನ್ನು ಜನರಿಗೆ ತಲುಪಿಸಲು ಅನುವಾಗುವಂತೆ 27000 ಗ್ರಾಮಬಂಧುಗಳ ನೇಮಕ, ಎಲ್ಲಾ ಸರ್ಕಾರಿ ಶಾಲೆಗಳಲ್ಲಿ ಎಲ್‌ಕೆಜಿ ಯುಕೆಜಿ ತರಗತಿಗಳನ್ನು ತೆರೆದು ತಲಾ ಇಬ್ಬರಂತೆ 90000 ಶಿಕ್ಷಕರ ನೇಮಕಾತಿ, ಗುತ್ತಿಗೆ ಸರ್ಕಾರದ ವಿವಿಧ ಇಲಾಖೆಗಳಲ್ಲಿ ಖಾಲಿ ಉಳಿದಿರುವ 2.80 ಲಕ್ಷ ಉದ್ಯೋಗಗಳ ಭರ್ತಿ ಸೇರಿದಂತೆ ಜನಸಂಖ್ಯೆ ಹೆಚ್ಚಳದಿಂದ ಮತ್ತೆ 2 ಲಕ್ಷ ಉದ್ಯೋಗಗಳ ಸೃಷ್ಟಿ ಸೇರಿದಂತೆ ಹಲವು ರಚನಾತ್ಮಕ ಕಾರ್ಯಸಾಧುವಾದ ಉದ್ಯೋಗ ಸೃಷ್ಟಿಯ ವಿಧಾನಗಳನ್ನು ಯುವ ಪ್ರಣಾಳಿಕೆ ಒಳಗೊಂಡಿದೆ. ಎಲ್ಲಾ ರಾಜಕೀಯ ಪಕ್ಷಗಳಿಗಿಂತ ಮುಂಚೆಯೇ ಇದನ್ನು ಬಿಡುಗಡೆ ಮಾಡಿದ್ದು ಎಲ್ಲಾ ರಾಜಕೀಯ ಪಕ್ಷಗಳಿಗೂ ಕೂಡ ಈ ಪ್ರಣಾಳಿಕೆಯನ್ನು ತಲುಪಿಸಿ ಈ ಪ್ರಣಾಳಿಯೆ ಅಂಶಗಳನ್ನು ಯಥಾವತ್ತಾಗಿ ಆ ರಾಜಕೀಯ ಪಕ್ಷಗಳು ತಮ್ಮ ಪ್ರಣಾಳಿಕೆಗಳಲ್ಲಿ ಅಳವಡಿಸಬೇಕು ಮತ್ತು ಅದನ್ನು ಜಾರಿಗೊಳಿಸುವ ಕಾಲನಿಗಧಿತ ಯೋಜನೆಯನ್ನು ಸಮಾಜದ ಮುಂದಿಡಬೇಕು ಎಂದು ಆಗ್ರಹಿಸಿದೆ.

ಇದೆಲ್ಲದರ ಜೊತೆಗೇನೆ ಈಗಾಗಲೇ ಅಭದ್ರ ನೌಕರಿಗಳಲ್ಲಿ ತೊಳಲಾಡುತ್ತಿರುವ ಲಕ್ಷಾಂತರ ಗುತ್ತಿಗೆ ನೌಕರರು ಇಷ್ಟು ವರ್ಷಗಳ ಕಾಲ ತಮ್ಮನ್ನು ಕಾಯಂ ಮಾಡಿಕೊಳ್ಳಬೇಕೆಂದು ತೀವ್ರತರದ ಹೋರಾಟ ನಡೆಸಿ ಸೋತಿದ್ದಾರೆ. 2006ರ ಉಮಾದೇವಿ ವರ್ಸಸ್ ಸ್ಟೇಟ್ ಆಫ್ ಕರ್ನಾಟಕ ಕೇಸಿನ ತೀರ್ಪಿನಲ್ಲಿ ಸುಪ್ರಿಂ ಕೋರ್ಟ್ ಕಾಯಂ ಮಾಡಿಕೊಳ್ಳಬಾರದೆಂದು ಆದೇಶಿಸಿದೆ. ಇದರಿಂದ ನೊಂದಿರುವ ಈ ನೌಕರರು ಈಗ ತಮಗೆ ಇದೇ ಸುಪ್ರಿಂ ಕೋರ್ಟ್ 2016ರಲ್ಲಿ ಎಲ್ಲಾ ನೌಕಕರಿಗೂ ಸಹ ಸಮಾನ ಕೆಲಸಕ್ಕೆ ಸಮಾನ ವೇತನ ಮತ್ತು ಸೇವಾಭದ್ರತೆ ಒದಗಿಸಬೇಕೆಂದು ಹಕ್ಕೊತ್ತಾಯಗಳನ್ನು ಮುಂದಿಟ್ಟುಕೊಂಡು ವಿನೂತನವಾಗಿ ಹೋರಾಟಕ್ಕಿಳಿದಿದ್ದಾರೆ. ಇದಕ್ಕಾಗಿ ಸಂಸತ್ ಮತ್ತು ವಿಧಾನಸಭೆಯಲ್ಲಿ ಕಾನೂನು ತರಬೇಕಿದೆ. ಹಾಗಾಗಿ ಸರ್ಕಾರಿ ಇಲಾಖೆಗಳು ಮತ್ತು ಖಾಸಗಿ ಕಂಪನಿಗಳಲ್ಲಿ ಕಾಂಟ್ರಾಕ್ಟ್ ಆಧಾರದಲ್ಲಿ ಕೆಲಸ ಮಾಡುತ್ತಿರುವವರೆಲ್ಲಾ ಚುನಾವಣಾ ಸಂದರ್ಭದಲ್ಲಿ ಒಂದಾಗಿ ತಾವು ಮತ್ತು ತಮ್ಮ ಕುಟುಂಬದ ಎಲ್ಲಾ ಮತಗಳು ಸೇರಿದರೆ ಲಕ್ಷಾಂತರ ಸಂಖ್ಯೆಯಾಗುತ್ತವೆ ಮತ್ತು ಆ ಮತಗಳನ್ನು ನಾವು ನಮ್ಮ ಉದ್ಯೋಗ ಭದ್ರತೆ ಕೊಟ್ಟವರಿಗೆ ಮಾತ್ರ ನೀಡುತ್ತೇವೆ ಎಂದು ಧೃಢವಾಗಿ ನಿರ್ಧರಿಸಿದ್ದಾರೆ. 1970ರಲ್ಲಿ ಈ ದೇಶದ ಸಂಸತ್ತು ಕಾನೂನೊಂದರ ಮೂಲಕ ತಂದ 'ಗುತ್ತಿಗೆ ಪದ್ಧತಿ ನಿಯಂತ್ರಣ ಮತ್ತು ರದ್ದತಿ ಕಾಯ್ದೆಯನ್ನು' ಸರ್ಕಾರವೇ ಇಂದಿಗೂ ಮುಂದುವರೆಸಿಕೊಂಡು ಬರುತ್ತಿರುವುದು ಸಂವಿಧಾನ ವಿರೋಧಿಯಾದ ಕ್ರಮವಲ್ಲದೇ ಬೇರೆನೂ ಅಲ್ಲ ಎಂದು ಯುವಜನರು ಆಕ್ರೋಶ ವ್ಯಕ್ತಪಡಿಸುತ್ತಿದ್ದಾರೆ. ಮತ್ತು ನಮಗೆ ಸುಭದ್ರ ಉದ್ಯೋಗ ಬೇಕು ಎಂಬು ಸ್ಪಷ್ಟ ಬೇಡಿಕೆಯನ್ನು ಮುಂದಿಟ್ಟಿದ್ದಾರೆ.

2018ರ ಫೆಬ್ರವರಿ 18 ರಂದು ಬೆಂಗಳೂರಿನಲ್ಲಿ ರಾಜ್ಯದ್ಯಂತ ಉದ್ಯೋಗಕಾಂಕ್ಷಿ ಯುವಜನರನ್ನು ಒಟ್ಟುಸೇರಿಸಿ, ಯುವ ಅಧಿವೇಶವನ್ನು ನಡೆಸಿತು. ಮೂರು ಮುಖ್ಯ ರಾಜಕೀಯ ಪಕ್ಷಗಳಾದ ಕಾಂಗ್ರೆಸ್, ಬಿಜೆಪಿ ಮತ್ತು ಜೆಡಿಎಸ್ ಮುಖ್ಯಸ್ಥರನ್ನು ಅಲ್ಲಿಗೆ ಆಹ್ವಾನಿಸಲಾಗಿತ್ತು. ಮೂರು ಪಕ್ಷಗಳು ಬರುವುದಾಗಿ ಭರವಸೆ ಕೊಟ್ಟಿದ್ದರೂ ಕೂಡ ಕಾಂಗ್ರೆಸ್‌ನ ಕೆಪಿಸಿಸಿ ಕಾರ್ಯಾಧ್ಯಕ್ಷರಾದ ದಿನೇಶ್ ಗುಂಡುರಾವ್ ಮಾತ್ರ ಯುವ ಅಧಿವೇಶನದಲ್ಲಿ ಭಾಗವಹಿಸಿ ಯುವಜನರ ಪ್ರಣಾಳಿಕೆಗೆ ಪ್ರತಿಕ್ರಿಯೆ ನೀಡಿದರು. ನಂತರ ಯುವಾಧಿವೇಶನಕ್ಕೆ ಬಾರದ ಜೆಡಿಎಸ್ ಮತ್ತು ಬಿಜೆಪಿ ಕಚೇರಿ ಎದುರು ನಾವು ಉಪವಾಸ ಸತ್ಯಾಗ್ರಹ ನಡೆಸಿದೆವು. ತದನಂತರವಷ್ಟೇ ಅವರು ಕ್ಷಮೇ ಕೇಳಿ ತಮ್ಮ ಪ್ರಣಾಳಿಕೆಗಳಲ್ಲಿ ನಮ್ಮ ಅಂಶಗಳನ್ನು ಒಳಗೊಳ್ಳುವುದಗಿ ಹೇಳಿದ್ದಾರೆ.

ಈ ಯುವ ಪ್ರಣಾಳಿಕೆಯನ್ನು ಯಥಾವತ್ತಾಗಿ ತಮ್ಮ ಪಕ್ಷದ ಪ್ರಣಾಳಿಕೆಯನ್ನಾಗಿ ಮಾಡುಕೊಂಡು ಕಾಲನಿಗಧಿತವಾಗಿ ಜಾರಿಗೊಳಿಸುವ ನೀಲನಕ್ಷೆಯನ್ನು ಪ್ರಕಟಿಸುತ್ತದೆಯೋ ಅದಕ್ಕೆ ಮಾತ್ರ ನಮ್ಮ ಬೆಂಬಲ ಎಂದು ಘೋಷಿಸಿದೆ. ಇಲ್ಲವಾದರೆ ನಿಜಕ್ಕೂ ಉದ್ಯೋಗ ಸೃಷ್ಟಿಸಬಲ್ಲ

ಪರ್ಯಾಯ ಯೋಜನೆಯನ್ನಾದರೂ ಈ ಪಕ್ಷಗಳು ಮುಂದಿಡಬೇಕು. ನಮ್ಮ ಬೆಂಬಲ ಘೋಷಿಸುವ ಮುನ್ನ ಆ ಪಕ್ಷಗಳ ಇದುವರೆಗಿನ ಸಾಧನೆಯ ಟ್ರ್ಯಾಕ್ ರೆಕಾರ್ಡ್, ಈ ಯುವ ಆಂದೋಲನವನ್ನು ಅವರು ಎಷ್ಟು ಗಂಭೀರವಾಗಿ ತೆಗೆದುಕೊಂಡಿದ್ದಾರೆ ಇತ್ಯಾದಿ ಅಂಶಗಳನ್ನು ಗಣನೆಗೆ ತೆಗೆದುಕೊಳ್ಳಲಾಗುತ್ತದೆ. ಒಂದು ವೇಳೆ ಯಾವ ರಾಜಕೀಯ ಪಕ್ಷವೂ ಇದಕ್ಕೆ ಸೂಕ್ತವಲ್ಲವೆನ್ನಿಸಿದರೆ, ನಮ್ಮ ರಾಜಕೀಯ ನಿಲುವನ್ನು ರಾಜ್ಯದೆಲ್ಲೆಡೆಯ ಯುವ ಪ್ರತಿನಿಧಿಗಳ ದೊಡ್ಡ ಸಮಿತಿಯು ಪ್ರಜಾತಾಂತ್ರಿಕವಾಗಿ ಮತ್ತು ಪಾರದರ್ಶಕವಾಗಿ ಯುವ ಅಧಿವೇಶನದ ನಂತರ ತಿರ್ಮಾನಿಸುತ್ತದೆ ಎಂದು ಘೋಷಿಸಿದೆ.

ನಾವು ಕೇವಲ ಉದ್ಯೋಗ ಕೇಳುತ್ತಿಲ್ಲ, ರಾಷ್ಟ್ರನಿರ್ಮಾಣದಲ್ಲಿ ನಮ್ಮ ಪಾಲು ಕೇಳುತ್ತಿದ್ದೇವೆ ಎಂಬ ಆಶಯ ಹೊಂದಿರುವ ಈ ಯುವಾಂದೋಲನವು ರಾಷ್ಟ್ರನಿರ್ಮಾಣದ ಮೂಲಕ ನಮ್ಮ ವ್ಯಕ್ತಿಗತ ಕೇರಿರ್ ನಿರ್ಮಾಣ ಎಂದು ಘೋಷಿಸಿದೆ. ಜಾತಿ, ಧರ್ಮ, ಹಣ ಮತ್ತು ಹೆಂಡದ ಆಧಾರದಲ್ಲಿ  ನಡೆಯುತ್ತಿರುವ ಇಂದಿನ ಚುನಾವಣೆಗಳನ್ನು ಬದಲಿಸಿ ಉದ್ಯೋಗ ಮತ್ತು ದೇಶದ ಅಭಿವೃದ್ದಿಯ ಆಧಾರದಲ್ಲಿ ನಡೆಸಬೇಕು, ಮತ್ತು ಈ ಬಾರಿಯ ಚುನಾವಣೆಯ ವಿಷಯ ಜನರ ನೈಜ ಬದುಕಿನ ಸಮಸ್ಯೆಯಾದ ನಿರುದ್ಯೋಗವೇ ಆಗಿರಬೇಕೆಂಬುದು ನಮ್ಮ ಅಭಿಮತ. ನಾವು ಎಲ್ಲೋ ಕೆಲವೊಂದಿಷ್ಟು ಉದ್ಯೋಗಗಳನ್ನು ಸೃಷ್ಟಿಸಿ, ಸಂಬಳ ಹೆಚ್ಚಿಸಿ, ಸೌಲಭ್ಯಗಳನ್ನು ನೀಡಿ ಎಂದು ಕೇಳುತ್ತಿಲ್ಲ. ಬದಲಿಗೆ ಸರ್ಕಾರದ ನೀತಿಗಳಲ್ಲಿ ಬದಲಾವಣೆ ತಂದು ದೊಡ್ಡ ಸಂಖ್ಯೆಯ ಉದ್ಯೋಗಗಳನ್ನು ಸೃಷ್ಟಿಸಿ ಎಂದು ಕೇಳುತ್ತಿದ್ದೇವೆ. ಈ ರೀತಿ ಪಾಲಿಸಿಯಲ್ಲಿ ಬದಲಾವಣೆ ಬೇಕಾದರೆ ಅದಕ್ಕೆ ದೊಡ್ಡ ರಾಜಕೀಯ ಆಂದೋಲನವೇ ನಡೆಯಬೇಕೆಂದು ತಿಳಿದಿದ್ದೇವೆ.

ಒಟ್ಟಾರೆಯಾಗಿ ಯುವಜನರನ್ನು ಕಡೆಗಣಿಸಿರುವ ರಾಜಕೀಯ ಪಕ್ಷಗಳು ಮತ್ತು ಸರ್ಕಾರಗಳಿಗೆ ಬಿಸಿಮುಟ್ಟಿಸಲು, ಅವರು ವಾಸ್ತವವಾಗಿ ಯೋಚಿಸುವಂತೆ ಮಾಡಲು ಇಂತಹ ಆಂದೋಲನದ ಅಗತ್ಯ ಇದ್ದೇ ಇದೆ. ಅದೇ ರೀತಿ ರಾಜಕಾರಣಿಗಳನ್ನು ಕುರಾಡಾಗಿ ಅನುಸರಿಸುವುದು ಬಿಟ್ಟು ಅವರನ್ನು ಪ್ರಶ್ನಿಸುವುದನ್ನು ಇಂದಿನ ಯುವಜನತೆಗೆ ಕಲಿಸಬೇಕಿದೆ. ಒಮ್ಮೆ ಅವರು ಪ್ರಶ್ನಿಸುವುದನ್ನು ಕಲಿತರೆ ಆಗ ಬದಲಾವಣೆ ತನ್ನಿಂದ ತಾನೇ ಆರಂಭವಾಗುತ್ತದೆ. ಪ್ರಶ್ನಿಸುವುದು ಪ್ರಜಾಪ್ರಭುತ್ವದ ಸುಂದರ ಗುಣ. ಪ್ರಜಾಪ್ರಭುತ್ವವನ್ನು ಗಟ್ಟಿಗೊಳಿಸಲಿಕ್ಕೆ, ಸುಂದರ ಗೌರವಯುತ ಜೀವನ ಎಲ್ಲರಿಗೂ ಸಾಧ್ಯವಾಗಿಸುವುದಕ್ಕಾಗಿ ನಡೆಯುತ್ತಿರುವ ಈ ಆಂದೋಲನವನ್ನು ನೀವು ಬೆಂಬಲಿಸಿ.

– ಮುತ್ತುರಾಜು.